ರಾಜ್ಯದ ಅಸಂಘಟಿತ ಕಾರ್ಮಿಕ ಸಾಮಾಜಿಕ ಮಂಡಳಿ

876 (1478) ಶ್ರೀ ಖಾದರ್ ಯು.ಟಿ. (ಮಂಗಳೂರು) : ಮಾನ್ಯ ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಅಸಂಘಟಿತ ಕಾರ್ಮಿಕರ ಸಾಮಾಜಿಕ ಮಂಡಳಿ ಸ್ಥಾಪಿತವಾಗಿದೆಯೇ;

ಆ) ಹಾಗಿದ್ದಲ್ಲಿ, ಸರ್ಕಾರ ಈ ಮಂಡಳಿಗೆ ಎಷ್ಟು ಹಣವನ್ನು ಬಿಡುಗಡೆಗೊಳಿಸಿದೇ;

ಇ) ಈ ಮಂಡಳಿ ವತಿಯಿಂದ ಯಾವ ಯಾವ ಕಾರ್ಯಕ್ರಮ ಗಳನ್ನು ಹಮ್ಮಿಕೊಳ್ಳಲಾಗಿದೆ (ವಿವರ ಒದಗಿಸುವುದು)?

ಶ್ರೀ ಬಿ.ಎನ್. ಬಚ್ಚೇಗೌಡ (ಕಾರ್ಮಿಕ ಸಚಿವರು) :

ಅ) ಸ್ಥಾಪಿತವಾಗಿದೆ.

ಆ) 2009–10ನೇ ಸಾಲಿನಲ್ಲಿ ರಾಜ್ಯ ಸರ್ಕಾರವು ಈ ಮಂಡಳಿಗೆ ರೂ.3,75,00,000/–ಗಳ ಅನುದಾನವನ್ನು ಬಿಡುಗಡೆ ಮಾಡಿದೆ.

ಇ) ಪ್ರಥಮ ಹಂತದಲ್ಲಿ 1) ದರ್ಜಿಗಳು, 2) ದೋಬಿಗಳು, 3) ಹಮಾಲರು, 4) ಆಟೋ ಮತ್ತು ಟ್ಯಾಕ್ಸಿ ಚಾಲಕರು ಹಾಗೂ 5) ಭದ್ರತಾ ಯೋಜನೆಯ ಅಡಿಯಲ್ಲಿ ತರಲು ಮಂಡಳಿಯ ಮೊದಲನೆಯ ಸಭೆಯಲ್ಲಿ ತೀರ್ಮಾನಿಸಲಾಗಿದೆ. ಯೋಜನೆಗಳನ್ನು ರೂಪಿಸಲು ವಿಶೇಷ ಸಮಿತಿಯನ್ನು ರೂಪಿಸಲಾಗಿದ್ದು, ಸಮಿತಿಯು ಈ ಐದು ಕ್ಷೇತ್ರದ ಕಾರ್ಮಿಕರ ಮತ್ತು ಮಾಲಿಕರ ಜೊತೆ ಚರ್ಚೆ ನಡೆಸಿದ್ದು,

1) ಅಂತಿಮ ಸಂಸ್ಕಾರದ ಧನಸಹಾಯ,

2) ಶೈಕ್ಷಣಿಕ ಧನ ಸಹಾಯ (ನೋಂದಾಯಿತ ಕಾರ್ಮಿಕರ ಇಬ್ಬರು ಮಕ್ಕಳಿಗೆ),

3) ಅಪಘಾತದಿಂದ ಶಾಶ್ವತ ದುರ್ಬಲತೆ/ ಮರಣಕ್ಕೀಡಾದ ನೋಂದಾಯಿತ ಕಾರ್ಮಿಕರಿಗೆ / ಅವರ ಅವಲಂಬಿತರಿಗೆ ಧನಸಹಾಯ,

4) ಭವಿಷ್ಯ ನಿಧಿ ಯೋಜನೆಗಳನ್ನು ಒಳಗೊಂಡ ಕರಡನ್ನು ಸಿದ್ಧಪಡಿಸಿರುತ್ತದೆ. ಅದನ್ನು ಮಂಡಳಿಯ ಅನುಮೋದನೆ ಪಡೆದ ನಂತರ ಅಧಿಸೂಚಿಸಲಾಗುವುದು.